ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಅಲ್ಪಸಂಖ್ಯಾತರ ಇಲಾಖೆಯಿಂದ ವಸತಿ ನಿಲಯಗಳು ನಡೆಸುತ್ತಿರುವ 40 ಸ್ವಯಂಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಧನಸಹಾಯ (ಅನುದಾನ) ನೀಡುತ್ತಿದೆ.

ಆ) 1. ಈ ಧನಸಹಾಯದಿಂದ ಸದರಿ ಸೇವಾಸಂಸ್ಥೆಗಳು ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡುತ್ತಿದೆ.

2. ಕೆಲವು ಅಲ್ಪಸಂಖ್ಯಾತ ಸೇವಾ ಸಂಸ್ಥೆಗಳು ಸರ್ಕಾರದ ಅನುದಾನದಿಂದ ವಸತಿನಿಲಯ ಕಟ್ಟಡಗಳನ್ನು ನಿರ್ಮಿಸುತ್ತಿವೆ.

3. ಕಳೆದ ಮೂರು ವರ್ಷಗಳ ವಿವರಗಳು ಈ ಕೆಳಕಂಡಂತಿದೆ.

	ವರ್ಷ	ಸ್ವಯಂಸೇವಾ ಸಂಸ್ಥೆಗಳ ಸಂಖ್ಯೆ	ವಸತಿ ನಿಲಯದಲ್ಲಿ ಸೌಕರ್ಯ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಕಟ್ಟಡ ನಿರ್ಮಾಣಕ್ಕೆ ಅನುದಾನ ಪಡೆದ ಸಂಸ್ಥೆಗಳ ಸಂಖ್ಯೆ
1.	1996-97	34	1012	2
2.	1997-98	35	1167	5
3.	1998-99	40	2044	5

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯ

383 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ವಿದ್ಯಾರ್ಥಿ ನಿಲಯಗಳಿಗೆ ಪ್ರತಿ ವರ್ಷ ಬಿಡುಗಡೆ ಮಾಡುತ್ತಿರುವ ಅನುದಾನವೆಷ್ಟು?

ಇ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಒಟ್ಟು ಹಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1631 ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು. 61 ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳು. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. 5835.23 ಲಕ್ಷಗಳು ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳಿಗಾಗಿ ಬಿಡುಗಡೆ ಮಾಡಲಾಗುತ್ತದೆ.

ರೂ. 199.06 ಲಕ್ಷಗಳನ್ನು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿಗೆ ಬಿಡುಗಡೆ ಮಾಡಲಾಗುತ್ತದೆ.

೨) ರೂ. 11616.54 ಲಕ್ಷಗಳನ್ನು ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ:ವಿದ್ಯಾರ್ಥಿನಿಲಯಗಳಿಗೆ ಬಿಡುಗಡೆ ಮಾಡಿದೆ.

ರೂ. 420.14 ಲಕ್ಷಗಳನ್ನು ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿಗೆ ಬಿಡುಗಡೆ ಮಾಡಿದೆ.

ANNEXURE

District wise details of Hostels.

Sl. No.	Name of the Districts	*Number of Hostels* Scheduled Tribe	Scheduled Caste.
1.	Bangalore (Urban)	-	60
2.	Bangalore (Rural)	02	64
3.	Chitradurga	02	91
4.	Davanagere	03	90
5.	Kolar	-	111
6.	Tumkur	03	103
7.	Shimoga	01	70
8.	Mysore	07	65
9.	Chamarajnagar	04	47
10.	Mandya	01	60
11.	Hassan	-	63
12.	Chikkamagalur	03	39
13.	Coorg	10	21
14.	Dakshina Kannada	08	19
15.	Udupi	03	19
16.	Belgaum	04	172

1	2	3	4
17.	Bijapur	-	116
18.	Bagalkote	-	47
19.	Dharwad	01	29
20.	Gadag	-	41
21.	Haveri	02	52
22.	Karwar	-	30
23.	Gulbarga	02	143
24.	Raichur	01	38
25.	Bellary	02	34
26.	Koppala	02	55
27.	Bidar	-	55
	Total	**61**	**1631**

ಅಲ್ಪಸಂಖ್ಯಾತರ ಕಾರ್ಯಕ್ರಮಗಳು

385 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರಿಗಾಗಿ ಇರುವ ರಾಜ್ಯ ಸರ್ಕಾರವು ಮತ್ತು ಕೇಂದ್ರ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಾವುವು?

ಆ) ರಾಜ್ಯ ಸರ್ಕಾರದ ಕಾರ್ಯಕ್ರಮಗಳಿಗಾಗಿ ಕಳೆದ ಒಂದು ವರ್ಷಕ್ಕೆ ನಿಗಧಿಪಡಿಸಿದ ಹಣ ಗುರಿ ಮತ್ತು ಪ್ರಗತಿ ಎಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

ರಾಜ್ಯದ ಅಲ್ಪಸಂಖ್ಯಾತರಿಗಾಗಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ರಾಜ್ಯ ಸರ್ಕಾರದಿಂದ ಕಾರ್ಯಗತಗೊಳಿಸುತ್ತಿರುವ ಕಾರ್ಯಕ್ರಮಗಳು ಇಂತಿವೆ.

1. ಸ್ವಾವಲಂಬನ ಸಾಫ್ಟ್ ಲೋನ್ ಯೋಜನೆ
2. ವಾಹನ ಚಾಲನಾ ತರಬೇತಿ ಯೋಜನೆ
3. ಪೋರ್‌ಮನಶಿಪ್ ತರಬೇತಿ ಯೋಜನೆ